ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 29-02-2024

ಮುಂದುವರೆದ ಪಾಟಿ ಸವಾಲುಃ ಶ್ರೀ. ಹೆಚ್.ಎಸ್.ಪಿ ವಕೀಲರಿಂದ

ನನ್ನ ತಂದೆ ಹೆಸರು ಮಲ್ಲಪ್ಪ. ನನ್ನ ತಂದೆಗೆ 5 ಜನ ಗಂಡು ಮಕ್ಕಳು 1 ನೇ ರಾಮಪ್ಪ, 2 ನೇ ಹೊನ್ನಪ್ಪ, 3 ನೇ ಚಂದ್ರಪ್ಪ, 4 ನೇ ಕೃಷ್ಣಪ್ಪ, 5 ನೇ ಪುಟ್ಟಸ್ವಾಮಿ. ನನ್ನ ಹೆಸರು ಕೃಷ್ಣಪ್ಪ ಇರುತ್ತದೆ. ನನ್ನ ತಂದೆ 1998 ರಲ್ಲಿ ಮೃತ ಪಟ್ಟಿರುತ್ತಾರೆ. ನನ್ನ ತಂದೆಗೆ ದೊಡ್ಡಮಳ್ತೆ, ಸುಳಿಮಳ್ತೆ ಮತ್ತು ಕಿಬ್ಬೆಟ್ಟ ಗ್ರಾಮಗಳಲ್ಲಿ ಜಮೀನುಗಳು ಇರುತ್ತವೆ. ನನ್ನ ತಂದೆಗೆ ಇದ್ದ ಜಮೀನನ್ನು ರಾಮಪ್ಪ ಮತ್ತು ಹೊನ್ನಪ್ಪ ರವರಿಗೆ 1982 ರಲ್ಲಿ ವಿಭಾಗ ಮಾಡಿ ಕೊಡಲಾಗಿತ್ತು. ಅವರಿಗೆ ವಿಭಾಗ ಮಾಡಿ ಕೊಟ್ಟ ನಂತರ ನನ್ನ ತಂದೆಯ ಜೊತೆ ಚಂದ್ರಪ್ಪ, ನಾನು, ಪುಟ್ಟಸ್ವಾಮಿ ಜೊತೆಯಲ್ಲಿದ್ದೇವು. ನನಗೆ ದೊಡ್ಡಮಳ್ತೆ, ಸುಳಿಮಳ್ಳೆ, ಕಿಬ್ಬೆಟ್ಟ ಗ್ರಾಮಗಳಲ್ಲಿ ಆಸ್ತಿ ಉಳಿದು ಕೊಂಡಿತ್ತು. ನನ್ನ ತಂದೆ ಇರುವಾಗ ದಿಃ 05-03-1992 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ವಿಭಾಗ ಪತ್ರ ನನ್ನ ತಂದೆ, ನಾನು, ಪುಟ್ಟಸ್ವಾಮಿ, ಚಂದ್ರಪ್ಪ ನಡುವೆ ಆಗಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಇದ್ದಾಗ ನನ್ನ ತಂದೆಗೆ ಬೇರೆ ಆಸ್ತಿ ಸರ್ವೆ ನಂ. 82 ರಲ್ಲಿ ಬಿಡಲಾಗಿತ್ತು. ಈಗ ಎಲ್ಲಾ ಆಸ್ತಿಯ ಖಾತೆಗಳು ನನ್ನ ತಂದೆ ಹೆಸರಿನಲ್ಲಿ ನಮ್ಮ ಹೆಸರಿಗೆ ಬದಲಾವಣೆ ಆಗಿರುತ್ತದೆ. ಯಾವ ಯಾವ ಆಸ್ತಿಗಳು ಯಾರ ಯಾರ ಹೆಸರಿಗೆ ಆಗಿದೆ ಎಂದು ಹೇಳಲು ಆಗಲ್ಲ ತುಂಬಾ ಇರುತ್ತವೆ. ನನ್ನ ಹೆಸರಿಗೆ ದೊಡ್ಡಮಳ್ತೆಯಲ್ಲಿ ಸರ್ವೆ ನಂ. 125/1 ರಲ್ಲಿ 1 ಎಕರೆ 25 ಸೆಂಟ್, ಸುಳಿಮಳ್ತೆಯಲ್ಲಿ ಸರ್ವೆ ನಂ. 1/102, 1/21, ಕಿಬ್ಬೆಟ್ಟದಲ್ಲಿ ಸರ್ವೆ ನಂ. 6 ರಲ್ಲಿ 1 ಎಕರೆ 42 ಸೆಂಟ್ 7 ರಲ್ಲಿ 2 ಎಕರೆ 87

ಸೆಂಟ್ ನಲ್ಲಿ 3 ಜನ ಅಂದರೆ ನನಗೆ, ಚಂದ್ರಪ್ಪ, ಪುಟ್ಟಸ್ವಾಮಿ ನಡುವೆ ವಿಭಾಗ ಆಗಬೇಕು. ದೊಡ್ಡಮಳ್ಳೆ ಮತ್ತು ಸುಳಿಮಳ್ಳೆಯ ಜಮೀನುಗಳು 1982 ರಲ್ಲಿ ನೊಂದಾಯಿತ ವಿಭಾಗ ಆಗಿ ಖಾತೆ ಸಹ ಆಗಿರುತ್ತದೆ. ಸದರಿ ಜಮೀನುಗಳು ನನ್ನ ಹೆಸರಿಗೆ ಖಾತೆ ಆಗಿರುತ್ತದೆ. 1982 ರ ಪಾಲುಪರಿಕತ್ತಿನ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ. 1982 ರ ಪಾಲುಪರಿಕತ್ತನ್ನು ನನಗೆ, ಚಂದ್ರಪ್ಪ, ಪುಟ್ಟಸ್ವಾಮಿ ರವರಿಗೆ ಎಷ್ಟೇಷ್ಟು ಆಸ್ತಿಗಳು ಎಂದು ತೋರಿಸಿಲ್ಲ.

1982 ರಲ್ಲಿ ಆದ ಪಾಲಿನಲ್ಲೇ ನಮಗೂ ಸಹ ಪಾಲನ್ನು ತೋರಿಸಿರುತ್ತಾರೆ. ಆ ಪಾಲುಪರಿಕತ್ತನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1982 ಪಾಲು ಆದ ನಂತರ ಸರ್ವೆ ನಂ. 7 ರಲ್ಲಿ ಆಸ್ತಿ ಪಾಲಾಗದೇ ಬಾಕಿ ಇತ್ತು ಆ ಆಸ್ತಿಯನ್ನು ನನಗೆ ಕೊಟ್ಟಿದ್ದಾರೆ ಆ ಬಗ್ಗೆ ಪಾಲುಪರಿಕತ್ತಿನಲ್ಲಿ ಬರೆದಿಲ್ಲ. ಆ ರೀತಿ ಆಸ್ತಿ ಉಳಿದಿರುವ ಬಗ್ಗೆ ಪಾಲು ಪರಿಕತ್ತಿನಲ್ಲಿ ನಮೂದಿಸಿಲ್ಲ. ದಿಃ 06-04-1995 ರಲ್ಲಿ ಎಂ.ಸಿ.94-95 ರಲ್ಲಿ ನನ್ನ ಹೆಸರಿಗೆ ಕೆಲವೊಂದು ಆಸ್ತಿಗಳನ್ನು ವರ್ಗಾವಣೆ ಮಾಡಿಕೊಂಡಿದ್ದೇನೆ ಎಂದರೆ ನನ್ನ ಜೊತೆಗೆ ಚಂದ್ರಪ್ಪ, ಪುಟ್ಟಸ್ವಾಮಿ ಹೆಸರಿಗೂ ವರ್ಗಾವಣೆಯಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ನೋಡಿ ಹೇಳಲಾಗುವುದಿಲ್ಲ. ಈ ಎಂಸಿಯಲ್ಲಿ ನನ್ನ ಹೆಸರಿಗೆ ಪಾಲಾಗಿದೆ ಆದಕಾರಣ ಸರ್ವೆ ನಂ. 1/12, 1/25, 1/26, 125 ಖಾತೆ ಮಾಡಿಕೊಡುವಂತೆ ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿ. ಸರ್ವೆ ನಂ. 1/25, 125 ಆಸ್ತಿಗಳನ್ನು ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ. ಆ ಖಾತೆಗೆ ಅರ್ಜಿ ಕೊಡುವಾಗ ಈ ಹಿಂದೆಯೇ ವಿಭಾಗ ಆಗಿರುವುದರಿಂದ ಸದರಿ ಆಸ್ತಿಗಳನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಡಬೇಕಾಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. 1982 ರಲ್ಲಿ ವಿಭಾಗ ಮಾಡಿಕೊಂಡಾಗ

ಮೇಲ್ಕಾಣಿಸಿದ ಆಸ್ತಿಗಳು ನನಗೆ ಬರಬೇಕೆಂದು ಎಲ್ಲೂ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿ ಹೆಸರು ಗಿರೀಜ ಇರುತ್ತದೆ. ಎಸ್.ಕೆ.ಚಂದನ್ ನನ್ನ ಮಗ, ಕೃಷ್ಣಪ್ಪ ಎಂದರೆ ನಾನೇ, ಆದರ್ಶ್ ನನ್ನ ಮಗ.

ನಾನು, ನನ್ನ ಪತ್ನಿ ಮತ್ತು ಮಕ್ಕಳು ಸೇರಿ ಡಿ.ಜೆ.ಈರಪ್ಪ ರವರಿಗೆ ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಮಾರಾಟ ಮಾಡುವಾಗ ಸದರಿ ಆಸ್ತಿ ನನ್ನ ಪಾಲಿಗೆ ಬಂದಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂ. 125/3 ರಲ್ಲಿ 1 ಎಕರೆ 26 ಸೆಂಟ್ ಅನ್ನು 6,38,000/- ಕ್ಕೆ ಮಾರಾಟ ಮಾಡಿರುತ್ತೇನೆ. ನಾನು ಈಗ ನೋಡುತ್ತಿರುವ ದಾಖಲೆ ನಾನು ಮಾರಾಟ ಮಾಡಿದ ಕ್ರಯ ಪತ್ರದ ದೃಡೀಕೃತ ನಕಲು ಎಂದರೆ ಸರಿ, ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 14 ಎಂದು ಗುರುತಿಸಲಾಯಿತು. ಸುಳಿಮಳ್ತೆಯಲ್ಲಿ ಸರ್ವೆ ನಂ. 1/25 ರಲ್ಲಿ 10 ಸೆಂಟ್ ನನ್ನ ಸ್ವಾದೀನ ಇದೆ ಎಂದರೆ ಸರಿ. ಸರ್ವೆ ನಂ. 1/12 ರಲ್ಲಿ 1 ಎಕರೆ 2 ಸೆಂಟ್ ನನ್ನ ಸ್ವಾದೀನ ಇದೆ ಎಂದರೆ ಸರಿ. ಸರ್ವೆ ನಂ. 1/21 ರಲ್ಲಿ 46 ಸೆಂಟ್ ನನ್ನ ಸ್ವಾದೀನ ಇದೆ ಎಂದರೆ ಸರಿ. ದೊಡ್ಡಮಳ್ಳೆಯ ಸರ್ವೆ ನಂ. 125 ರಲ್ಲಿ 1 ಎಕರೆ 26 ಸೆಂಟ್ ನನ್ನ ಹೆಸರಿನಲ್ಲಿದೆ ಎಂದರೆ ಸರಿ, ದೊಡ್ಡ ಹಣಕೊಡಳ್ಳಿ ಸರ್ವೆ ನಂ. 47/7 ರಲ್ಲಿ 10 ಸೆಂಟ್ ನನ್ನ ಹೆಸರಿನಲ್ಲಿದೆ ಎಂದರೆ ಅದು ನನ್ನ ಮತ್ತು ಚಂದ್ರಪ್ಪ ರವರ ಸ್ವಾದೀನ ಇರುತ್ತದೆ. ದೊಡ್ಡಹಣಕೊಡು ಗ್ರಾಮದ ಸರ್ವೆ ನಂ. 163/2 ರಲ್ಲಿ 75 ಸೆಂಟ್ ಪೈಕಿ 35 ಸೆಂಟ್ ಜಾಗ ನನ್ನ ಸ್ವಾದೀನ ಇದೆ ಎಂದರೆ ನನ್ನ ತಂದೆ ಮಲ್ಲಪ್ಪ ರವರ ಸ್ವಾದೀನ ಇರುತ್ತದೆ. ಕಿಬ್ಬೆಟ್ಟ ಸರ್ವೆ ನಂ. 6 ರಲ್ಲಿ 2 ಎಕರೆ 87 ಸೆಂಟ್ ಪೈಕಿ 1 ಎಕರೆ 43 ಸೆಂಟ್ ಆಸ್ತಿ ನನ್ನ ಸ್ವಾದೀನ ಇದೆ ಎಂದರೆ ಸರಿ.

ಇದರ ಪಕ್ಕದಲ್ಲಿ ಸರ್ವೆ ನಂ. 7 ಇದೆ ಎಂದರೆ ಸರಿ. ಆ ಸರ್ವೆ ನಂಬರ್ ಪುಟ್ಟಸ್ವಾಮಿ ಸ್ವಾದೀನ ಇದೆ ಎಂದರೆ ಸರಿ.

ನನಗೆ ಸರ್ವೆ ನಂ. 7 ರಲ್ಲಿ 2 ಎಕರೆ 87 ಸೆಂಟ್ ನನ್ನ ಸ್ವಾದೀನ ಇರುತ್ತದೆ. ಪುಟ್ಟಸ್ವಾಮಿಗೆ ಸರ್ವೆ ನಂ. 7 ರಲ್ಲಿ 4 ಎಕರೆ 38 ಸೆಂಟ್ ಪೈಕಿ 2 ಎಕರೆ 72 ಸೆಂಟ್ ಅವರ ಸ್ವಾದೀನ ಇದೆ ಎಂದರೆ ಸರಿಯಲ್ಲ. ದೊಡ್ಡಹಣಕೊಡು ಸರ್ವೆ ನಂ. 163/2 ರಲ್ಲಿ 75 ಸೆಂಟ್ ಪೈಕಿ 35 ಸೆಂಟ್ ಪುಟ್ಟಸ್ವಾಮಿ ಸ್ವಾದೀನ ಇದೆ ಎಂದರೆ ಸರಿಯಲ್ಲ. ದೊಡ್ಡಮಳ್ತೆ ಗ್ರಾಮದ ಚಂಗಪ್ಪ ರವರ ಪತ್ನಿ ನಮ್ಮ ವಿರುದ್ಧ ನಾವು ಅವರಿಗೆ ತಿಳಿಯದಂತೆ ಕ್ರಯ ಪತ್ರ ಬರೆಸಿಕೊಂಡಿದ್ದೇವೆ ಎಂದು ದಾವೆ ಹೂಡಿದ್ದರು ಅದು ನಮ್ಮ ಪರ ತೀರ್ಪು ಆಗಿದೆ ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ದೊಡ್ಡಮಳ್ತೆ ಸರ್ವೆ ನಂ. 55/18 ರಲ್ಲಿ 1 ಎಕರೆ 70 ಸೆಂಟ್ ಪುಟ್ಟಸ್ವಾಮಿ ಸ್ವಾದೀನ ಇದೆ ಎಂದರೆ ಸರಿ. ದೊಡ್ಡಮಳ್ತೆ ಸರ್ವೆ ನಂ. 125 ರಲ್ಲಿ 3 ಎಕರೆ 75 ಸೆಂಟ್ ಪೈಕಿ 1 ಎಕರೆ 26 ಸೆಂಟ್ ಪುಟ್ಟಸ್ವಾಮಿ ಸ್ವಾದೀನ ಇದೆ ಎಂದರೆ ಸರಿ.

ಚಂದ್ರಪ್ಪ ರವರಿಗೆ ದೊಡ್ಡಮಳ್ತೆಯಲ್ಲಿ ಸರ್ವೆ ನಂ. 1/25 ರಲ್ಲಿ 3 ಎಏಕರೆ 78 ಸೆಂಟ್ ಪೈಕಿ 1 ಎಕರೆ 26 ಸೆಂಟ್ ಅವರ ಸ್ವಾದೀನ ಇದೆ ಎಂದರೆ ಸರಿ. ಸುಳಿಮಳ್ತೆಯಲ್ಲಿ ಸರ್ವೆ ನಂ. 1/12 ರಲ್ಲಿ 2 ಎರಕೆ 4 ಸೆಂಟ್ ಪೈಕಿ 1 ಎಕರೆ 2 ಸೆಂಟ್ ಅವರ ಸ್ವಾದೀನ ಇದೆ, ಸುಳಿಮಳ್ತೆ ಸರ್ವೆ ನಂ. 1/22 ರಲ್ಲಿ 55 ಸೆಂಟ್ ಚಂದ್ರಪ್ಪ ರವರ ಸ್ವಾದೀನ ಇದೆ. ದೊಡ್ಡಹಣಕೊಡು ಸರ್ವೆ ನಂ, 47/7 ರಲ್ಲಿ 10 ಸೆಂಟ್ ಪೈಕಿ 5 ಸೆಂಟ್ ಜಾಗ ಚಂದ್ರಪ್ಪ ಸ್ವಾದೀನ ಇದೆ. ಕಿಬ್ಬೆಟ್ಟಿ ಸರ್ವೆ ನಂ. 6 ರಲ್ಲಿ 2 ಎಕರೆ 87 ಸೆಂಟ್ ಪೈಕಿ 1 ಎಕರೆ 44 ಸೆಂಟ್ ಚಂದ್ರಪ್ಪ ರವರ ಸ್ವಾದೀನ ಇದೆ. ಈ ಆಸ್ತಿಗಳನ್ನು ದಿಃ 05-03-1992 ರಲ್ಲಿ

ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈಗ ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳು ವಿಭಾಗ ಆಗಿರುತ್ತದೆ ಸರ್ವೆ ನಂ. 7 ಮಾತ್ರ ವಿಭಾಗ ಆಗಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

1992 ರಲ್ಲಿ ವಿಭಾಗ ಪತ್ರ ಮಾಡಿಕೊಂಡು ನಾನು ಹೇಳಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ವಿಭಾಗ ಆದ ನಂತರ ಪುಟ್ಟಸ್ವಾಮಿ ಸರ್ವೆ ನಂ. 7 ಕ್ಕೆ ಖಾತೆ ಮಾಡಿಕೊಡುವಂತೆ ಅರ್ಜಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಆಧಾರದ ಮೇಲೆ ಸರ್ವೆ ನಂ. 7 ನ್ನು ವಿಭಾಗ ಮಾಡಿ 7/1 ಎಂದು ಖಾತೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಎಂ.ಸಿ.12/1996-97 ತಕರಾರು ನಂತೆ ಪುಟ್ಟಸ್ವಾಮಿ ಹೆಸರಿಗೆ 2 ಎಕರೆ 72 ಸೆಂಟ್ ಮತ್ತು ಹೊನ್ನಪ್ಪ ರವರಿಗೆ 1.63 ಎಕರೆ ಖಾತೆ ಬದಲಾವಣೆಗೆ ಆದೇಶವಾಗಿದೆ ಎಂದರೆ ಸರಿಯಲ್ಲ. ಆ ಆದೇಶದ ಪ್ರಕಾರ ಸರ್ವೆ ಮಾಡಿ ಸರ್ವೆ ನಂಬರ್ ವಿಂಗಡಣೆಯಾಗಿ ಆಕಾರ್ ಬಂದ್ ದುರಸ್ತಿ ಆಗಿದೆ ಎಂದರೆ ಸರಿಯಲ್ಲ. ಆ ಆಧಾರದ ಮೇಲೆ ಎಂಸಿ ಆಗಿ ಖಾತಾ ಬದಲಾವಣೆ ಪುಟ್ಟಸ್ವಾಮಿ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ನಿಪಿ 13 ದಿಃ 05-03-1992 ರಲ್ಲಿ ಆಗಿದೆ ಎಂದು ಹೇಳುವ ವಿಭಾಗ ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ ಅದನ್ನು ನಾನು ಮಾಡಿಲ್ಲ. ಚಂದ್ರಪ್ಪ ರವರ ಸಹಿ ಬಿಟ್ಟು ಬೇರೆ ಯಾರ ಸಹಿಯನ್ನು ಗುರುತಿಸಲು ಆಗುತ್ತಿಲ್ಲ, ಮತ್ತು ಅವರುಗಳು ಯಾರು ಸಹಿ ಮಾಡಿಲ್ಲ. ಸದರಿ ಪತ್ರದಲ್ಲಿರುವ ಸಹಿ ನನ್ನದಲ್ಲ. 1992 ರ ವಿಭಾಗ ಪತ್ರವನ್ನು ಅಲ್ಲಗಳೆಯುವ ಕಾರಣದಿಂದ ಸಹಿ ನನ್ನದಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

Sd/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ